# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -06.12.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಕರಿಯಪ್ಪ | ಫ್ರಾ.ಸಾ. | – | 11 |
| ತಂದೆಯ ಹೆಸರು | – | ಹನುಮಂತಾಬೋವಿ | ಚಾ.ಸಾ. | – | 11 |
| ವಯಸ್ಸು | – | 65 ವರ್ಷ | | | |
| ಉದ್ಯೋಗ | – | ವ್ಯವಸಾಯ | | | |
| ವಾಸ ಸ್ಥಳ | – | ಕಣಿವೆ ಜೋಗಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

1. ಚಾಸಾ 01 ಮತ್ತು 10 ನನ್ನ ಸೊಸೆ ಮತ್ತು ಮಗ . ಕಣಿವೆ ಜೋಗಿಹಳ್ಳಿಯಲ್ಲಿ ಸರ್ವೇ ನಂ. 51 ರಲ್ಲಿ ನನ್ನ ಹೆಸರಿನಲ್ಲಿ ಎರಡು ಎಕರೆ ಮತ್ತು ನನ್ನ ಹೆಂಡತಿಯ ಹೆಸರಿನಲ್ಲಿ ಎರಡು ಎಕರೆ ಜಮೀನು ಇದೆ . ಸದರಿ ಜಮೀನಿನಲ್ಲಿ ಮೆಕ್ಕೆ ಜೋಳ ಹಾಕಿದ್ದೆ . ನ್ಯಾಯಾಲಯದ ಮುಂದಿರುವ ಆರೋಪಿಗಳೆಲ್ಲರೂ ಗೊತ್ತು ಅವರು ಗೊಲ್ಲ ಜನಾಂಗದವರು , ನಾವು ಬೋವಿ ಜನಾಂಗದವರು .

2. 3 ವರ್ಷದ ಹಿಂದೆ ಆರೋಪಿಗಳು ನಮ್ಮ ಜಮೀನಿನಲ್ಲಿ ದನಗಳು ಓಡಾಡಲು ದಾರಿ ಬಿಡಬೇಕು ಎಂದು ಕೇಳಿದರು . ನಾವು ದಾರಿ ಬಿಟ್ಟುಕೊಟ್ಟೆವು . ಕುರಿ ದನ ಮೇಯಲು ನಮ್ಮ ಪೂರ್ಣ ಜಮೀನು ಬಿಟ್ಟು ಕೊಡಿ ಎಂದು ಕೇಳಿದರು . ನಾವು ಬಿಡಲು ಆಗುವುದಿಲ್ಲ ಎಂದು ಹೇಳಿದ್ದೇವು . ಬೆಳಗ್ಗೆ 11 ಗಂಟೆಯಲ್ಲಿ ನಾನು ನನ್ನ ಮಕ್ಕಳು , ಸೊಸೆಯಂದಿರು ಹೊಲದಲ್ಲಿ ಇದ್ದ ಶೆಡ್ ಮನೆಯಲ್ಲಿ ಇದ್ದೇವು . ನಮ್ಮ ಊರಿನ ಗೊಲ್ಲರೆಲ್ಲರೂ ನಮ್ಮ ಜಮೀನಿಗೆ ಕುರಿಗಳನ್ನು ಬಿಟ್ಟರು ನಮ್ಮ ಅಡಿಕೆ ಗಿಡಗಳನ್ನು ಕಡಿದರು . ಅಡಿಕೆ ಗಿಡಗಳು

ಮತ್ತು ಶೆಡ್ ಮನೆಗೆ ಬೆಂಕಿ ಹಚ್ಚಿದ್ದರು . ಸ್ಪ್ರಿಂಕ್ಲರ್ ಪೈಪ್ ಗೆ ಮನೆ ಮೇಲೆ ಹಾಕಿ ಬೆಂಕಿ ಹಚ್ಚಿದ್ದರು . ಬೋರ್ ವೆಲ್ ಪಂಪ್ ಕಿತ್ತು ಹಾಕಿ ಸುಟ್ಟು ಹಾಕಿದರು . ಪೈಪ್ ಗಳು , ಕೇಬಲ್ ಸುಟ್ಟು ಹೋದವು . ನಮ್ಮನ್ನು ವಡ್ಡ ಸೂಳೇ ಮಕ್ಕಳು , ಜಮೀನು ಬಿಡಬೇಕು ಅಂತ ನಮಗೆ ಹೊಡೆದರು . ಚಾಸಾ01 ರವರ ಸೀರೆ ಬಿಚ್ಚಿ ಹೊಡೆದರು . ಆರೋಪಿಗಳೆಲ್ಲರೂ ನಮಗೆ ಹೊಡೆದರು . ಸುಮಾರು 3 ಸಾವಿರ ಕುರಿ ಬಿಟ್ಟಿದ್ದರು . ನಾವು ಆಸ್ಪತ್ರೆಗೆ ಹೋಗಿ ದಾಖಲಾದೇವು . ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆ ದಿನ ಆ ರೀತಿ ಗಲಾಟೆ ಮಾಡಿದ ವ್ಯಕ್ತಿಗಳು . ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ . ಸುಮಾರು 12 ಲಕ್ಷ ನಷ್ಟವಾಯಿತು .

**– ಪಾಟೀ ಸವಾಲು – 1 ರಿಂದ 11 ನೇ ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

3 . ನಮ್ಮ ಜಮೀನಿನಿಂದ ನಮ್ಮ ವಾಸದ ಮನೆಗೆ 2 ಮೈಲಿ ದೂರವಾಗುತ್ತದೆ . ನನಗೆ 80 ವರ್ಷವಾಗಿದೆ ಎಂದರೆ ಸರಿಯಲ್ಲ . ನನಗೆ ವಯಸ್ಸಾಗಿರುವುದರಿಂದ ನಾನು ಮನೆಯಲ್ಲೆ ಇರುತ್ತೇನೆ . ನನ್ನ ಮಕ್ಕಳು , ಸೊಸೆಯಂದಿರು ಹೊಲಕ್ಕೆ ಹೋಗುತ್ತಾರೆ ಎಂದರೆ ಸರಿಯಲ್ಲ. ನನ್ನ ಮೊಮ್ಮಕ್ಕಳು ಶಾಲೆಗೆ ಹೋಗುತ್ತಾರೆ ಎಂದರೆ ಸರಿ . ಸುಮಾರು 20 ವರ್ಷದ ಹಿಂದೆಯೇ ಆರೋಪಿಗಳಿಗೆ ನಾವು ದಾರಿ ಬಿಟ್ಟಿದ್ದೇವು . ಅದು ನಕಾಶೆ ಕಂಡ ದಾರಿ ಎಂದರೆ ಸರಿ . ಈಗಲೂ ಸದರಿ ದಾರಿಯಲ್ಲಿ ದನ ಕರುಗಳು ಓಡಾಡುತ್ತವೆ ಎಂದರೆ ಸರಿ . ದಾರಿ ಬಿಡುವ ವಿಚಾರದಲ್ಲಿ ಪಂಚಾಯತಿ ಆಗಿತ್ತು ಎಂದರೆ ಸರಿ .

4. ದಿಃ 01.08.2020 ಕ್ಕೆ ಮೊದಲು ಪ್ರಸ್ತುತ ಎರಡನೇ ಆರೋಪಿ ನನ್ನ ಮಕ್ಕಳ ವಿರುದ್ದ ಹೊಳಲ್ಕೆರೆ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ . ಸದರಿ ಪ್ರಕರಣ ಈಗಲೂ ಚಾಲ್ತಿಯಲ್ಲಿ ಇದೆ

ಎಂದರೆ ಸರಿ . ದಾರಿಯಲ್ಲಿ ಹೋಗುವುದನ್ನು ತಡೆದು ಗಲಾಟೆ ಮಾಡಿದರು ಎಂದು 2 ನೇ ಆರೋಪಿ ಸದರಿ ದೂರು ನೀಡಿದ್ದರು ಎಂದರೆ ಸರಿಯಲ್ಲ .

5. ನಮ್ಮ ಜಮೀನಿನಲ್ಲಿ 3 ವರ್ಷದ 3 ಸಾವಿರ ಅಡಿಕೆ ಗಿಡಗಳು ಇದ್ದವು . ಅಡಿಕೆ ಗಿಡಗಳನ್ನು ಯಾರು ಕಿತ್ತು ಬೆಂಕಿ ಹಚ್ಚಿದರು ಎಂದು ನಿರ್ದಿಷ್ಟವಾಗಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನಮಗೆ ಹೊಡೆದಿದ್ದರಿಂದ ಜ್ಞಾನ ತಪ್ಪಿತ್ತು ಎನ್ನುತ್ತಾರೆ . ನಿಮಗೆ ಯಾರು ಹೊಡೆದಿದ್ದರು ಎಂದರೆ ಸಾಕ್ಷಿ 200–300 ಜನ ಇದ್ದರು ಎನ್ನುತ್ತಾರೆ . ನನ್ನ ಬೆನ್ನಿಗೆ , ತಲೆಗೆ , ಕಾಲಿಗೆ ಹೊಡೆದರು . ನನಗೆ ರಕ್ತಗಾಯವಾಗಿತ್ತು . ನಾನು ಹಾಕಿಕೊಂಡಿದ್ದ ಬಟ್ಟೆ ರಕ್ತವಾಗಿತ್ತು . ನೆಲದ ಮೇಲೆ ರಕ್ತ ಬಿದಿತ್ತು . ನನ್ನ ಮಕ್ಕಳು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು . ನನ್ನ ಮಕ್ಕಳಾ ಸಹಾಯದಿಂದ ನಾನು ಆಸ್ಪತ್ರೆಗೆ ಹೋದೆ . ವೈದ್ಯರ ಹತ್ತಿರ ನಾನು ಘಟನೆಯ ಬಗ್ಗೆ ಹೇಳಿದೆ . ಯಾರು ಯಾವುದರಿಂದ ಹೊಡೆದರು ಎಂದು ನಾನು ವೈದ್ಯರ ಹತ್ತಿರ ಹೇಳಲಿಲ್ಲ . ಆಟೋದಲ್ಲಿ ನನ್ನನ್ನು ನನ್ನ ಮಕ್ಕಳು ಕರೆದುಕೊಂಡು ಬಂದರು . ಚಿತ್ರದುರ್ಗ ಡಿವೈ.ಎಸ್.ಪಿ. ಕಚೇರಿಯಲ್ಲಿ ಗಲಾಟೆಯಾದ ದಿನವೇ ಹೇಳಿಕೆ ನೀಡಿದ್ದೇನೆ . ದನ ಮೇಯಿಸಲು ಜಾಗ ಬೇಕು ಎಂದು ಆರೋಪಿಗಳು ಕೇಳಿದರು ಎಂದು ನಾನು ಡಿ.ವೈ.ಎಸ್.ಪಿ.ಗೆ ಹೇಳಿಕೆ ನೀಡಿದ್ದೇನೆ . ಎಲ್ಲರೂ ವಡ್ಡ ಸೂಳೇ ಮಕ್ಕಳಾ ಎಂದು ಬೈದರು . 300 ಸಾವಿರ ಕುರಿ ಬಿಟ್ಟಿದ್ದರು ಎಂದು ನಾನು ಹೇಳಿಕೆಯಲ್ಲಿ ಹೇಳಿದ್ದೇನೆ . ಸಿದ್ದಪ್ಪ , ಕೆಂಚಪ್ಪ , ಚಿತ್ತಪ್ಪ ಶ್ರೀನಿವಾಸ ಚಾಸಾ01 ರವರ ಸೀರೆ ಎಳೆದರು . ಆರೋಪಿಗಳೆಲ್ಲಾ ನಮ್ಮ ಜಮೀನಿಗೆ ಕುರಿ ಬಿಟ್ಟು , ಅಡಿಕೆ ಗಿಡ ಕಡಿದು ಸುಟ್ಟರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಜಾತಿ ನಿಂದನೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಗಳೆಲ್ಲರೂ ನಮಗೆ ದೈಹಿಕ

ಹಲ್ಲೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಯಾವುದೇ ಘಟನೆ ನಡೆಯದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ದೂರು ನೀಡಿದ್ದು ಪ್ರಕರಣ ದಾಖಲಾದ ನಂತರ ಚಾಸಾ1 ರವರ ಮುಖಾಂತರ ಈ ಸುಳ್ಳು ಕೊಡಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.